ಶ್ರೀ ಎ. ಕೃಷ್ಣಶೆಟ್ಟಿ.—1962ನೇ ಇಸವಿ ಮಾರ್ಚ್ ತಿಂಗಳಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಂದು ಮುರ ಅಕ್ಕಿಗೆ 25 ರೂಪಾಯಿ ಇತ್ತು ಎಂದು ಹೇಳಿದರೆ ಅದನ್ನು ನಂಬಲಿಕ್ಕೆ ಸಾಧ್ಯ ಉಂಟೋ ?

ಶ್ರೀ ಆರ್. ಎಂ. ಪಾಟೀಲ್.—ತಾವು ಪ್ರಶ್ನೆಯಲ್ಲಿ ಸ್ಪಷ್ಟವಾಗಿ ಯಾವ ತಾರೀಕನ್ನು ಕೊಟ್ಟಿದ್ದೀರೋ ಆ ತಾರೀಕಿಗೆ ನಾವು ಉತ್ತರವನ್ನು ಹೇಳಬೇಕಾಯಿತು. ತಾವು ಪ್ರಶ್ನೆಯನ್ನು ಕೇಳಿದ ದಿನಾಂಕಕ್ಕಿಂತ ಮುಂಚಿನ 12 ತಿಂಗಳಲ್ಲದ್ದ ಬೆಲೆ ಎಂದರೆ ಮಾರ್ಚ್ ತಿಂಗಳೊಳಗೆ ಇದ್ದ ಬೆಲೆಯನ್ನು ಕೇಳಿದ್ದೀರಿ ; ಅದಕ್ಕೆ ಉತ್ತರವನ್ನು ಹೇಳಲಾಯಿತು.

ಶ್ರೀ ಎ. ಕೃಷ್ಣ ಶೆಟ್ಟಿ.—ಎಷ್ಟು ರಿಲೀಫ್ ಅಂಗಡಿಗಳನ್ನು ತೆರೆದಿದ್ದೀರಿ ?

ಶ್ರೀ ಆರ್. ಎಂ. ಪಾಟೀಲ್.—20 ಷಾಪುಗಳನ್ನು ತೆರೆಯಲಾಗಿದೆ.

ಶ್ರೀ ಬಿ. ಭಾಸ್ಕರ ಶೆಟ್ಟಿ.—ಉಡುಪಿ ತಾಲ್ಲೂಕಿನಲ್ಲಿ ಎಷ್ಟು ಫೇರ್ ಪ್ರೈಜ್ ಡಿಪೋಗಳನ್ನು ತೆರೆದಿದ್ದೀರಿ ?

ಶ್ರೀ ಆರ್. ಎಂ. ಪಾಟೀಲ್.—ಫೇರ್ ಪ್ರೈಜ್ ಡಿಪೋಗಳನ್ನು ತೆರೆಯಬೇಕೆಂದು ಅಲ್ಲಿಂದ ಬೇಡಿಕೆಗಳು ಬಂದರೆ, ಆಗ ಅವುಗಳನ್ನು ತೆರೆಯಲಾಗುತ್ತದೆ.

ಶ್ರೀ ಬಿ. ಭಾಸ್ಕರ ಶೆಟ್ಟಿ.—ಈಗ ಮಂಗಳೂರಿಗೆ ಕಲ್ಲಕ್ಕೋಚೆ ಮುಂತಾದ ಸ್ಥಳಗಳಿಂದ ಅಕ್ಕಿ ಬರಲು ತೊಂದರೆಯಾಗಿದೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಆರ್. ಎಂ. ಪಾಟೀಲ್.—ಇಲ್ಲಿಯ ವರೆಗೆ ಬೇಕಾದಷ್ಟು ಅಕ್ಕಿಯನ್ನು ತರಿಸಲಾಗಿದೆ. ನಮಗೆ ಯಾವ ಕಷ್ಟವೂ ಇದುವರೆಗೆ ಕಂಡು ಬಂದಿಲ್ಲ.

ಶ್ರೀ ಎಸ್. ನುಬ್ಬಯ್ಯ ನಾಯಕ್.—ಪ್ರತಿ ವರ್ಷವೂ ಅಲ್ಲಿ ಜುಲೈ ಮತ್ತು ಸೆಪ್ಟೆಂಬರ್ ತಿಂಗಳಲ್ಲಿ ಅಕ್ಕಿಯ ಬೆಲೆಯು ಏರುತ್ತಾ ಇರುತ್ತದೆ. ಈ ವರ್ಷ ಒಂದು ಮುರ ಅಕ್ಕಿಗೆ 33 ರೂಪಾಯಿಗಳು ಇದೆ. ಆದಕಾರಣ ಹೆಚ್ಚು ಅಂಗಡಿಗಳನ್ನು ತೆರೆಯಬೇಕೆಂದು ಸರ್ಕಾರ ಮನಗಂಡಿದೆಯೇ ?

ಶ್ರೀ ಆರ್. ಎಂ. ಪಾಟೀಲ್.—ಅದಕ್ಕೆ ಈಗಾಗಲೇ ನಾನು ಉತ್ತರವನ್ನು ಹೇಳಿದ್ದೇನೆ.

Sri SANJEEVANATHA IKALA.—Is it not a fact that the quantity of rice delivered through the Central Marketing Society is 40 tons daily ?

Sri R. M. PATIL.—The Hon'ble Member is not correct in saying that the daily off-take is 40 tons. In the month of June, 250 tons have been received.

ಶ್ರೀ ಗೋಪಾಲ ಸಾಲೆನ್ನ.—ಈಗ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಂದು ಮುರ ಅಕ್ಕಿಗೆ 25 ರೂಪಾಯಿ ಇದೆಯೆಂದು ತಾವು ಹೇಳುತ್ತೀರಿ. ಮಾನ್ಯ ನುಬ್ಬಯ್ಯ ನಾಯಕ್ ಅವರು ಒಂದು ಮುರ ಅಕ್ಕಿಗೆ 33 ರೂಪಾಯಿ ಇದೆ ಎಂದು ಹೇಳುತ್ತಾರೆ. ಇದನ್ನು ನಂಬೋಣವೇ ಅಥವಾ ಇಪ್ಪೊತ್ತು ಚಾಲ್ತಿಯಲ್ಲಿರುವುದನ್ನು ನಂಬೋಣವೇ ?

Sri R. M. PATIL.—I have answered that question. If the Hon'ble Member wants substantial relief from the Government, I have no objection to answer a specific question.

ಶ್ರೀ ಎಂ. ಶ್ರೀನಿವಾಸ ನಾಯಕ್.—ಈಗ ಮಂಗಳೂರಿನಲ್ಲಿ ಎಷ್ಟು ಫೇರ್ ಪ್ರೈಜ್ ಷಾಪುಗಳನ್ನು ತೆರೆಯಲಾಗಿದೆ ?

Sri R. M. PATIL.—20 fair price shops have been opened and they are working. If more shops are necessary, they will be opened.

Sri S. SHIVAPPA.—How far the cost of index has risen on account of the inflation of prices of foodgrains ?

Mr. SPEAKER.—If the Hon'ble Minister has not got the figures, he may place the same on the Table of the House later on.

Sri S. SHIVAPPA.—It is an important question. Let the Minister furnish the answer.

Mr. SPEAKER.—Even without calling upon the Minister, I could disallow such supplementaries. But I said that if the information was not available readily, it might be placed on the Table of the House later.

Sri S. SHIVAPPA.—If the Minister pleads his inability to give information I shall certainly accept it.

Mr. SPEAKER.—Next question.

According of sanction for the construction of a School building at Nagarnahally in Holenarasipur Taluk.

*Q.—101. Sri H. D. DEVE GOWDA (Holenarasipur).—

Will the Government be pleased to state :—

(*a*) when the villagers of Nagaranahally, Holenarasipur Taluk, have deposited the amount for the construction of the School building and the amount they have deposited ;

(*b*) the reasons for not sanctioning the shool building though they have deposited the amount long back ;

(*c*) whether they intend to take suitable steps at least now to complete the school building early ;

(*d*) whether they would follow the old rules of contribution while sanctioning this school building ?

A.—Sri S. R. KANTHI (Minister for Education).—

(*a*)	Rs. 1,000 on 31-5-1947.	
	Rs. 1,000 on 31-3-1948.	
Total	Rs. 2,000	

(*b*) One room school building with Government grant of Rs. 1,800 was sanctioned under Type Design Scheme during 1958-59. Work was not taken up as the villagers represented for two rooms and the matter was under correspondence.

(*c*) Yes.

(*d*) Will be considered.

ಶ್ರೀ ಎಚ್. ಡಿ. ದೇವೇಗೌಡ.—ಹೊಳೆನರಸೀಪುರ ತಾಲ್ಲೂಕಿನ ನಾಗರಹಳ್ಳಿಯ ಗ್ರಾಮದವರು ಶಾಲಾ ಕಟ್ಟಡವನ್ನು ಕಟ್ಟುವುದಕ್ಕೋಸ್ಕರ ಸರ್ಕಾರಕ್ಕೆ 1948ನೇ ಇಸವಿಯಲ್ಲಿ ಎರಡು ಸಾವಿರ ರೂಪಾಯಿಗಳನ್ನು ಕಟ್ಟಿದರು. ಅದಕ್ಕೆ ಸರ್ಕಾರದವರು ಎಸ್ಟಿಮೇಟ್ ತಯಾರು ಮಾಡಿದ್ದು 1958ನೇ ಇಸವಿಯಲ್ಲಿ ಎಂದು ಹೇಳಿದ್ದೀರಿ. ಒಂದು ಎಸ್ಟಿಮೇಟ್ ತಯಾರು ಮಾಡುವುದಕ್ಕೆ ಹತ್ತು ವರ್ಷಗಳು ಬೇಕೇ ?

†ಶ್ರೀ ಎಸ್. ಆರ್. ಕಂಠಿ.—ಎಸ್ಟಿಮೇಟ್ ಮಾಡುವುದರಲ್ಲೇ ಅಷ್ಟೊಂದು ಕಾಲ ಆಗಿದೆ ಎಂದು ಹೇಳುವುದಕ್ಕಾಗುವುದಿಲ್ಲ. ಆದರೆ ಇಷ್ಟೊಂದು ದಿಲೇ ಆಗುವುದಕ್ಕೆ ಕಾರಣವೇನು ಎಂಬುದಕ್ಕೆ ಈಗ ನನ್ನಲ್ಲಿ ಇನ್‌ಫರ್‌ಮೇಷನ್ ಇಲ್ಲ.

ಶ್ರೀ ಎಚ್. ಡಿ. ದೇವೇಗೌಡ.—ಹಾಗಾದರೆ ನಾವು ಪ್ರಶ್ನೆ ಕೇಳುವ ಉದ್ದೇಶವೇನು ?

ಶ್ರೀ ಎಸ್. ಆರ್. ಕಂಠಿ.—1958-59ನೇ ಇಸವಿಯಲ್ಲಿ ಒಂದು ರೂಮು ಕಟ್ಟುವುದಕ್ಕೆ ಸರ್ಕಾರದವರು ಸ್ಯಾಂಕ್ಷನ್ ಮಾಡಿದ್ದಾರೆ. ಆದರೆ ಆ ಗ್ರಾಮದವರು ಎರಡು ರೂಮುಗಳನ್ನು ಕಟ್ಟಿಸಿಕೊಡಬೇಕೆಂದು ಕೇಳುತ್ತಿದ್ದಾರೆ. ಆದ್ದರಿಂದ ಸರ್ಕಾರದವರು ಆ ವಿಚಾರವನ್ನು ವಿಚಾರ ಮಾಡುತ್ತಿದ್ದಾರೆ.

1-30 P.M.

ಶ್ರೀ ಎಚ್. ಡಿ. ದೇವೇಗೌಡ—ಹಾಗಿದ್ದ ಮೇಲೆ ಒಂದೇ ರೂಮಿಗೆ ಅಂದಾಜು ಮಾಡಿದರೇ ?

ಶ್ರೀ ಎಸ್. ಆರ್. ಕಂಠಿ.—ಆ ಅಂದಾಜು ಮಾಡಿದ್ದು 1958-59ನೇ ಸಾಲಿನಲ್ಲಿ. ಎರಡು ಕೊಠಡಿಗಳಿಗೆ ಬೇಕಾಗಿದೆ. ಒಂದು ಕೊಠಡಿ ಎಂದು ತಪ್ಪಾಗಿ ಹಿಂದೆ ವರದಿ ಮಾಡಿದ್ದಾರೆ. ಆದ್ದರಿಂದ ಅದನ್ನು ಸರ್ಕಾರದವರು ಗಮನದಲ್ಲಿಟ್ಟುಕೊಂಡು ಮಂಜೂರು ಮಾಡುವ ವಿಚಾರವಿದೆ.

ಶ್ರೀ ಜಿ. ಎ. ತಿಮ್ಮಪ್ಪ ಗೌಡ.—1947-48ನೇ ಇಸವಿಯಲ್ಲಿಯೇ ಆ ಹಳ್ಳಿಯವರು ಸುಮಾರು 2 ಸಾವಿರ ರೂಪಾಯಿಗಳನ್ನು ಶಾಲಾ ಕಟ್ಟಡಕ್ಕೋಸ್ಕರ ಕಟ್ಟಿದ್ದರೂ ಆ ಶಾಲಾ ಕಟ್ಟಡಕ್ಕೆ ಸಲ್ಲತಕ್ಕ ಪೂರ್ತಿ ಪೈಸೆಯನ್ನು ಸರ್ಕಾರದವರು ಹಿಂದೆ ಹಾಕಿಕೊಂಡು ಆ ಕಟ್ಟಡವನ್ನು ಕಟ್ಟಿಸುತ್ತಿದ್ದರೆಂಬುದು ಸರ್ಕಾರದ ಗಮನಕ್ಕೆ ಬಂದಿಯೇ ?

ಶ್ರೀ ಎಸ್. ಆರ್. ಕಂಠಿ.—ಬಂದಿದೆ.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಹಾಗಿದ್ದರೆ, 1947-48ನೇ ಇಸವಿಯಲ್ಲಿಯೇ ಎರಡು ಸಾವಿರ ರೂಪಾಯಿಗಳನ್ನು ಡಿಪಾಜಿಟ್ ಮಾಡಿದ್ದರೂ ಕೂಡ ಇಲ್ಲಿಯವರೆಗೂ ಅವರಿಗೆ ಶಾಲಾ ಕಟ್ಟಡವನ್ನು ಕಟ್ಟಿಸಿಕೊಡದೆ ಈಗ ಮತ್ತೆ ಹಳ್ಳಿಯವರು ಕಂಟ್ರಿಬ್ಯೂಷನ್ ಕೊಡಬೇಕೆಂದು ಕೇಳುವುದು ನ್ಯಾಯವೇ ?

ಶ್ರೀ ಎಸ್. ಆರ್. ಕಂಠಿ.—ಹಳ್ಳಿಯವರು ಕಂಟ್ರಿಬ್ಯೂಷನ್ ಕೊಡಬೇಕೆಂದು ಕೇಳಲಿಲ್ಲ. ಆ ಪ್ರದೇಶಕ್ಕೆ ಎರಡು ಕೊಠಡಿಗಳ ಪಾಠಶಾಲೆಯನ್ನು ಕೊಡುವುದನ್ನು ಸರ್ಕಾರದವರು ವಿಚಾರ ಮಾಡುತ್ತಿದ್ದಾರೆ.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಹಾಗಾದರೆ ಸರ್ಕಾರದವರು ಈಗಲಾದರೂ ಜಾಗ್ರತೆ ಆ ಕೆಲಸವನ್ನು ಮಾಡಿಸಿಕೊಡುತ್ತಾರೆಯೇ ?

ಶ್ರೀ ಎಸ್. ಆರ್. ಕಂಠಿ.—ಆ ರೀತಿ ಯೋಚನೆ ಸರ್ಕಾರಕ್ಕಿದೆ.

A MEMBER.—What is the difficulty in following the old rules ?

ಶ್ರೀ ಎಸ್. ಆರ್. ಕಂಠಿ.—ಸಾಮಾನ್ಯವಾಗಿ ಹಳೆಯ ರೂಲ್ಸುಅನ್ನು ಗಮನದಲ್ಲಿಟ್ಟುಕೊಂಡು ಇದನ್ನು ಪೂರೈಸಬೇಕೆಂಬ ವಿಚಾರ ಸರ್ಕಾರದ ಗಮನದಲ್ಲಿದೆ.

ಶ್ರೀ ಬಿ. ಚನ್ನಬೈರೇಗೌಡ.—ಶಾಲಾ ಕಟ್ಟಡದ ಟೈಪ್ ಡಿಸೈನ್ ಸ್ಕೀಂ ಆಗಿ ಹದಿನೈದು ವರ್ಷಗಳಾಗಿದ್ದರೂ ಕಟ್ಟಡದ ನಿರ್ಮಾಣವಾಗಲು ಇಷ್ಟು ತಡವಾದುದಕ್ಕೆ ಕಾರಣವೇನು ?

ಶ್ರೀ ಎಸ್. ಆರ್. ಕಂಠಿ.—ಅದಾಗಿ ಹದಿನೈದು ವರ್ಷಗಳೇನೂ ಆಗಲಿಲ್ಲ. ಕಡಮೆ ಕಾಲವಾಗಿದೆ.

ಶ್ರೀ ಎಚ್. ಆರ್. ಕೇಶವಮೂರ್ತಿ.—1947-48ರಲ್ಲಿ ಆಗ ಇದ್ದಂಥ ಸಾವಿರ ರೂಪಾಯಿ ಬೆಲೆಗೂ ಈಗಿನ ಸಾವಿರ ರೂಪಾಯಿಯ ಬೆಲೆಗೂ ವ್ಯತ್ಯಾಸವೇನಿಲ್ಲವೇ ?

ಶ್ರೀ ಎಸ್. ಆರ್. ಕಂಠಿ.—ಅದು ತಮಗೇ ಗೊತ್ತಿದೆ.

ಶ್ರೀ ಎಸ್. ಎಂ. ಕೃಷ್ಣ.—1947-48ರಲ್ಲಿ ಗ್ರಾಮನಿವಾಸಿಗಳು ಎರಡು ಸಾವಿರ ರೂಪಾಯಿಗಳನ್ನು ಕೊಟ್ಟಿದ್ದಾರೆಂದು ಉತ್ತರದಲ್ಲಿ ಹೇಳಿದ್ದೀರಿ. ಆ ಎರಡು ಸಾವಿರ ರೂಪಾಯಿಗಳಿಗೂ ಇದುವರೆಗೆ ಬಡ್ಡಿ ಏನಾಗುತ್ತದೆ ?

ಶ್ರೀ ಎಸ್. ಆರ್. ಕಂಠಿ.—ಬಡ್ಡಿ ಎಲ್ಲಾ ಇರುತ್ತದೆ. ಅದು ಎಲ್ಲಿಯೂ ಹೋಗುವುದಿಲ್ಲ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಇದನ್ನು ದೇಶದಾದ್ಯಂತ ಅಪ್ಲೈ ಆಗುವ ಹಾಗೆ ಮಾಡುತ್ತಾರೋ ?

ಶ್ರೀ ಎಸ್. ಆರ್. ಕಂಠಿ.—ಇಲ್ಲಿ ಎರಡು ಕೊಠಡಿಗಳ ಪಾಠಶಾಲೆ ಬೇಕೆಂದು ಕೇಳಿರುವ ವಿಚಾರವಿದೆ. ಆದ್ದರಿಂದ ಇದು ಇಡೀ ರಾಜ್ಯದ ವಿಚಾರವಲ್ಲ.

ಶ್ರೀ ಬಿ. ಹುಚ್ಚೇಗೌಡ.—195-598ನೇ ಸಾಲಿನಲ್ಲಿ ಈ ಸ್ಕೀಮಿಗೆ 1800 ರೂಪಾಯಿಗಳು ಮಂಜೂರು ಮಾಡಲಾಗಿದೆಯೆಂದು ಹೇಳಿದ್ದೀರಿ. ಆದರೆ ಇದು 1947-48ರಲ್ಲಿ ಮಂಜೂರಾಗಿರಲಿಲ್ಲವೇ ? ಹಾಗಿಲ್ಲದಿದ್ದರೆ ಈ ನಾಲ್ಕು ವರ್ಷಗಳು ಸುಮ್ಮನೆ ಇರಲು ಕಾರಣವೇನು ?

ಶ್ರೀ ಎಸ್. ಆರ್. ಕಂಠಿ.—ಕಾಲವೇನೋ ಹೆಚ್ಚಾಗಿದೆ. ಆದರೆ ಅದನ್ನು ಮಾಡಿಸುವ ವಿಚಾರ ನಮ್ಮಲ್ಲಿದೆ.

Sri ANNA RAO GANAMUKHI.—May I know whether these amounts of Rs. 1,000 and Rs. 2,000 were deposited during 1947-48 when they were cheap designs and so they framed two sets of rules ?

Sri S. R. KANTHI.—Yes.

ಶ್ರೀ ಸಿ. ಜೆ. ಮಕ್ಕಣ್ಣಪ್ಪ.—ಆ ರೂಲ್ ಎರಡು ಕೊಠಡಿಗಳಿಗೂ ಅಪ್ಲಿಕಬಲ್ ಎಂದು ಹೇಳಿದ್ದೀರಿ. ಅಂದ ಮೇಲೆ ದೇಶದಾದ್ಯಂತ ಇದನ್ನು ಜಾರಿಗೆ ತರುವುದಕ್ಕೆ ಸರ್ಕಾರಕ್ಕೆ ಇರುವ ಕಷ್ಟಗಳೇನು ?

ಶ್ರೀ ಎಸ್. ಆರ್. ಕಂಠಿ.—ಆ ಪ್ರಶ್ನೆ ಇಲ್ಲಿ ಬರುವುದಿಲ್ಲ.

ಶ್ರೀ ಸಿ. ಜೆ. ಮೆಕ್ಕಣ್ಣಪ್ಪ.—ಹಾಗಾದರೆ ಇದಕ್ಕೆ ಮಾತ್ರ ರೂಲ್ಸನ್ನು ರಿಲ್ಯಾಕ್ಸ್ ಮಾಡುತ್ತೇವೆಂದು ಹೇಗೆ ಹೇಳುತ್ತೀರಿ ?

ಶ್ರೀ ಎಸ್. ಆರ್. ಕಂಠಿ.—ಬಹಳ ಹಿಂದೆ ಈ ಹಣವನ್ನು ಗ್ರಾಮಸ್ಥರು ಕೊಟ್ಟಿರುವುದರಿಂದ ಇದು ಹಳೆಯ ಕಾಲದ ಸ್ಕೀಮ್ ಆಗಿದೆ. ಇದು ಯೋಗ್ಯವಾದುದು ಮತ್ತು ನ್ಯಾಯವಾದುದು ಎಂದು ಸರ್ಕಾರ ವಿಚಾರ ಮಾಡುತ್ತಿದೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಹಾಗಾದರೆ ಈಗ ಎಲ್ಲಾ ಕೇಸುಗಳನ್ನೂ ಹಳೆಯ ರೂಲ್ಸ್ ಪ್ರಕಾರ ಸರ್ಕಾರದವರು ತೀರ್ಮಾನ ಮಾಡುತ್ತಾರೆಯೇ ?

ಶ್ರೀ ಎಸ್. ಆರ್. ಕಂಠಿ.—ಹಳೆಯ ರೂಲ್ಸ್ ಪ್ರಕಾರ ಆ ಬಗ್ಗೆ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇವೆ. ಸರ್ಕಾರದವರೂ ಕೂಡ ಅದನ್ನೇ ಯೋಚನೆ ಮಾಡುತ್ತಿದ್ದಾರೆ. ಆದರೆ ಮಾನ್ಯ ಸದಸ್ಯರು ಈ ರೀತಿ ಹೈಪೋತಿಟಿಕಲ್ ಪ್ರಶ್ನೆ ಕೇಳಿದರೆ ನಾನು ಅಂಥಾದ್ದಕ್ಕೆ ಉತ್ತರ ಹೇಳಲಾರೆ.

———

Godowns sanctioned in Shimoga District to stock the Foodgrains.

*Q.—155. Sri T. D. DEVENDRAPPA (Bhadravathi).—

Will the Government be pleased to state:—

(*a*) the number of godowns sanctioned in Shimoga District to stock the foodgrains purchased from the ryots (Talukwar information may be given) ;

(b) the number of godown[s] constructed so far ;

(*c*) the number of godowns yet to be constructed ;

(*d*) the reasons for the delay in constructing these godowns.

*A.—Sri RAMAKRISHNA HEGDE (Minister for Co-operation and Development).—

(*a*)	1 Shikaripur	...	9
	2 Bhadravathi	...	5
	3 Hosanagar	...	4
	4 Shimoga	...	5
	5 Thirthahalli	...	3
	6 Channagiri	...	5
	7 Honnali	...	5
	8 Sagar	...	3
	9 Sorab	...	3
	Total	...	42

(*b*) 20.

(*c*) 22.

(*d*) (1) Non-availability of proper sites.
(2) Non-availability of iron, steel and cement.
(3) Higher tender rates received than the sanctioned estimated rates.
(4) Want of suitable contractors.
(5) Lack of supervisory technical personnel regarding the construction of godowns.

ಶ್ರೀ ಟಿ. ಡಿ. ದೇವೇಂದ್ರಪ್ಪ.—ನನ್ನ ಪ್ರಶ್ನೆಗೆ ಉತ್ತರವಾಗಿ ಶಿವಮೊಗ್ಗ ಜಿಲ್ಲೆಯಲ್ಲಿ ರೈತರಿಂದ ಕೂಡ ಆಹಾರ ಧಾನ್ಯಗಳನ್ನು ದಾಸ್ತಾನಿಡಲು 42 ಮಳಿಗೆಗಳು ಮಂಜೂರಾಗಿವೆ ಎಂಬುದಾಗಿ ಉತ್ತರ ಹೇಳಿದ್ದೀರಿ. ಹಾಗಾದರೆ ಇವು ಎಲ್ಲೆಲ್ಲ ಎಷ್ಟೆಷ್ಟು ತಾಲ್ಲೂಕ್‌ವಾರ್ ಮಂಜೂರಾಗಿದೆ ಎಂಬುದನ್ನು ವಿವರವಾಗಿ ಹೇಳುತ್ತೀರಾ ?

†ಶ್ರೀ ರಾ ಮ ಕೃ ಷ್ಣ ಹೆ ಗ್ಗ ಡೆ.—ತಾಲ್ಲೂಕ್ ವಾರಾಗಿಯೇ ಉತ್ತರ ಕೊಟ್ಟಿದೆ.

ಶ್ರೀ ಟಿ. ಡಿ. ದೇವೇಂದ್ರಪ್ಪ.—ಒಂದೊಂದು ತಾಲ್ಲೂಕಿನಲ್ಲೂ ಯಾವ ಯಾವ ಭಾಗದಲ್ಲಿ ಎಷ್ಟೆಷ್ಟು ಮಳಿಗೆಗಳನ್ನು ನಿರ್ಮಿಸಲಾಗಿದೆ ?

Sri RAMAKRISHNA HEGDE.—It is a long list.

Mr. SPEAKER.—You can place it on the Table of the House. The Hon'ble Member may see it.

ಶ್ರೀ ಟಿ. ಡಿ. ದೇವೇಂದ್ರಪ್ಪ.—ಭದ್ರಾವತಿಯಲ್ಲಿ ಯಾವ ಯಾವ ಕಡೆಗಳಲ್ಲಿ ಈ ಮಳಿಗೆಗಳನ್ನು ನಿರ್ಮಿಸಿದ್ದೀರಿ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಮಂಗೋಟೆ-1, ಭದ್ರಾವತಿ ಊರಿನಲ್ಲಿ-1, ಮಲ್ಲಪರ್ಪನ್‌ಕೋ-ಆಪರೇಟಿವ್ ಸೊಸೈಟಿ, ಭದ್ರಾವತಿ-1, ಬನವಾಪಟ್ಟಣ-1, ಮತ್ತು ಹೊಳೆ ಹೊನ್ನೂರು-1, ಹೀಗೆ ನಿರ್ಮಿಸಲಾಗಿದೆ.